# ಮುಗ್ಧತೆಯ ಗೆಲುವು

ಸೊನ್ನಲಿಗೆಯ ಸಿದ್ಧರಾಮೇಶ್ವರನ ವಚನವೊಂದು ಹೀಗಿರುವುದು. ಜಗದೆರೆಯ ಮಾಡಿದನೊಂದು ಕುರಿಮರಿಯ. ಆ ಕುರಿಮರಿ ಮೇಯುತ್ತಿದೆ!

ಸರ್ವಜಗದವರೆಲ್ಲ ಅನಂತರಕ್ಕಸರು, ಹಿಂಸೆ ಮಾಡುತ್ತಲೈದಿದರು.

ಹೋದ ರಕ್ಕಸರು ಸತ್ತರು, ಇದ್ದ ಕುರಿಮರಿ ಇದ್ದಂತಿಪ್ಪುದು!

ಇದೇನು ಕೌತುಕ! ಕಪಿಲಸಿದ್ಧಮಲ್ಲಿಕಾರ್ಜುನ

ಈ ರಚನೆಯ ಅರ್ಥವೇನು? ಯಾವ ಅನುಭವದ; ಯಾವ ಅಪೂರ್ವ ಕಾಣ್ಕೆಯ ಹಿನ್ನೆಲೆಯಲ್ಲಿ ಇದು ಮೂಡಿಬಂತು? ಈ ವಚನದೊಳಗಿನ ಸನ್ನಿವೇಶವೇನು? ಜಗದೊಡೆಯನಿಗೆ ಪ್ರಿಯವಾದ ಕುರಿಮರಿ ಏನನ್ನು ಸೂಚಿಸುತ್ತದೆ? ಕುರಿಮರಿ ತನ್ನಪಾಡಿಗೆ ತಾನಿರುವಂತಿದೆ. ತನ್ನಪಾಡಿಗೆ ತಾನು ಮೇಯುತ್ತಿದೆ. ಅಥವಾ ಜಗದೊಡೆಯನೆಂಬ ಕುರುಬ ಇದನ್ನು ಹಾಗೆ ಮೇಯಿಸುತ್ತಿದ್ದಾನೆ. ಕುರಿಮರಿ ತನ್ನಲ್ಲೇ ತಾನಿದ್ದು ಮೇದುಕೊಂಡಿರುವುದೇ ಈ ಕುರುಬನಿಗೆ ಸಹಜವಾಗಿ ಇಷ್ಟವಾದಂತಿದೆ. ಅಥವಾ ಇಂಥದೊಂದು ತನ್ನಸುಖವನ್ನು ತನ್ನಲ್ಲೇ ಕಾಣುವಂಥ– ಸನ್ನಿವೇಶವನ್ನು ಅವನೇ ಸೃಷ್ಟಿಸಿರಬೇಕು! ಅವನೂ ಹಾಗೆಯೇ ಇರುವವನೋ ಏನೋ!

ಆದರೆ ಇಷ್ಟೇ ಅಲ್ಲ. ಇಲ್ಲಿ ಸರ್ವಜಗದವರೆಲ್ಲ ಇದ್ದಾರೆ. ಅನಂತ ಸಂಖ್ಯೆಯಲ್ಲಿದ್ದಾರೆ. ಇವರಾದರೋ ಮಾನವರಲ್ಲ; ಮಾನವರಂತೆ ಕಾಣಿಸುವವರಿರಬಹುದು! ಆದರೆ ಗುಣದಲ್ಲಿ ರಕ್ಕಸರು. ಏಕೆಂದರೆ ಇವರೆಲ್ಲ ಹಿಂಸೆಯ ಜಾಡಿಗೆ ಬಿದ್ದವರು. ಇವರ ಬದುಕಿಡೀ ಹಿಂಸೆ. ಪರಹಿಂಸೆ. ತಮ್ಮನ್ನು ಬಿಟ್ಟು ಉಳಿದೆಲ್ಲರೂ ಇವರಿಗೆ ಪರರೇ ಆದುದರಿಂದ ಇವರಿಂದ ಎಲ್ಲರಿಗೂ ಹಿಂಸೆ. ಈ ರಕ್ಕಸರು ಕುರಿಮರಿಗೂ ಹಿಂಸೆ ಕೊಟ್ಟಿರಬಹುದು. ರಕ್ಕಸರಿಗೆ ಉಳಿದೆಲ್ಲರೂ ಕುರಿಮರಿಗಳಂತೆ ಕಾಣುವುದಲ್ಲವೆ? ಅಲ್ಲದೆ ಸಾಧುಕುರಿಮರಿಯನ್ನು ನೋಡುವಾಗಲೇ ಇದಕ್ಕೆ ಹಿಂಸೆ ಕೊಡೋಣ ಎನ್ನಿಸುವುದೇ ರಕ್ಕಸ ಚಿತ್ತವೃತ್ತಿಯಲ್ಲವೆ?

ಆದರೆ ಏನಾಯಿತೆಂದರೆ ಈ ಹಿಂಸಾ ಪ್ರವೃತ್ತಿಯ ರಕ್ಕಸರು ತಮ್ಮ ಹಿಂಸೆಗೆ ತಾವೇ ಬಲಿಯಾಗಿ ಹೋದರು. ನೆತ್ತರು ನೆತ್ತರನ್ನೇ ಕುಡಿಯುತ್ತ; ನೀರನ್ನಲ್ಲ. ಆದರೆ ದುರ್ಬಲವೆಂಬಂತೆ ಕಾಣುವ, ಹಿಂಸೆಗೆ ಸುಲಭದ ಬಲಿ ಎಂಬಂತೆ ಕಾಣುವ ಕುರಿಮರಿ ಮಾತ್ರ, ಈ ಎಲ್ಲ ಹಿಂಸೆಗಳನ್ನೂ ಮೀರಿ, ಇನ್ನೂ ತನ್ನ ಕುರಿಮರಿತನವನ್ನು ಕಳೆದುಕೊಳ್ಳದೆ, ಆ ಮೂಲಕ ಜಗದೊಡೆಯನ ಪ್ರೀತಿಯನ್ನೂ ಕಳೆದುಕೊಳ್ಳದೆ ಇದ್ದ ಕುರಿಮರಿ ಇದ್ದಂತಿಪ್ಪುದು.

ಇದೊಂದು ಕೌತುಕ ಎನ್ನುತ್ತಾನೆ ಸಿದ್ಧರಾಮ. ಆ ಮೂಲಕ ಈ ಸಮಸ್ಯೆಯನ್ನು ಕುರಿತು ಚಿಂತಿಸಿ ಎಂದು ಸೂಚಿಸುತ್ತಾನೆ. ವಚನದಲ್ಲಿ ಹಿಂಸೆಯ ಪ್ರಸ್ತಾವ ಇದೆ. ರಕ್ಕಸರ ಉಲ್ಲೇಖವಿದೆ. ಆದುದರಿಂದ ಯಾವೆಲ್ಲ ಹೆಸರುಗಳಲ್ಲಿ ಇತಿಹಾಸದುದ್ದಕ್ಕೆ ಹಿಂಸೆ ನಡೆದಿದೆಯೋ ಮತ್ತು ಅಂಥ ಹಿಂಸೆಗೆ ಕಾರಣರಾಗಿ ಮನುಷ್ಯರು ತಮ್ಮ ಮನುಷ್ಯತ್ವವನ್ನೇ ಮರೆತು ರಕ್ಕಸರಂತೆ ನಡೆದುಕೊಂಡರೋ ಅವೆಲ್ಲವುಗಳನ್ನೂ ಸಿದ್ಧರಾಮ ಪ್ರಸ್ತಾವಿಸುತ್ತಾನೆ ಎನ್ನಬಹುದು. ಹಿಂಸೆ ಧರ್ಮದ ಹೆಸರಲ್ಲಿ ನಡೆದಿದೆ. ರಾಜಕೀಯದ ಹೆಸರಲ್ಲಿ ನಡೆದಿದೆ. ನಾಗರಿಕತೆಯ ಹೆಸರಲ್ಲಿ ನಡೆದಿದೆ. ನಿಜಕ್ಕಾದರೆ, ಹೆಸರಿಡುವುದೇ ಹೆಸರಲ್ಲಿ ಬಡಿದಾಡುವುದಕ್ಕೆ ಕಾರಣವಾಗಿ ಬಿಟ್ಟಿದೆ! ಹೆಸರಿಟ್ಟು ಕರೆವ ಕಷ್ಟ ಎಂದು ಅಲ್ಲಮಪ್ರಭು ಸಾಕೂತವಾಗಿ ಹೇಳಿದ್ದು ಸುಮ್ಮಗೆ ಅಲ್ಲ! ಇಂತಿರಲು ವಚನದಲ್ಲಿ ಬಂದಿರುವ ಕುರಿಮರಿ ಎಂದರೆ ಅದು ಸರ್ವಧರ್ಮ ಸಮನ್ವಯದ ಸಂಕೇತ; ಹಿಂಸೆಗೆ ವಿರುದ್ಧವಾದ ಶಾಂತಿ ಸೌಹಾರ್ದಗಳ ಸಂಕೇತ ಎಂದು ವಿವರಿಸಿದ ಆಧುನಿಕ ವಿದ್ವಾಂಸರಿದ್ದಾರೆ.

ಕುರಿಮರಿ ಎಂದರೆ, ಜೀವ ಜೀವಾತ್ಮ. ರಕ್ಕಸರು ಎಂದರೆ ಇಂದ್ರಿಯಗಳನ್ನು ಉದ್ರೇಕಿಸಿ ಹಿಂಸೆಗೆ ಕಾರಣವಾಗುವ ಕಾಮ ಕ್ರೋಧಾದಿ ತೀವ್ರ ಭಾವಗಳು. ಜೀವವಾದರೋ ಈ ತೀವ್ರ ಭಾವಾವಿಷ್ಟವಾಗುವ ಇಂದ್ರಿಯಗಳಿಗೆ ಹಂಗಿಗನಾಗದೆಯೂ ಇರಬಲ್ಲುದು; ಇರುತ್ತದೆ. ಇದೇ ನಾವು ಒಳನೋಟದಿಂದ ತಿಳಿಯಬೇಕಾದ್ದು– ಇದು ಹಳೆಗಾಲದ ಆಧ್ಯಾತ್ಮಿಕ ವಿವರಣೆ. ಇರಲಿ.

ಕುರಿಮರಿ ಎಂದಾಗ ನಾಗರಿಕತೆಗೆ ವಿಮುಖವಾದ ಪದದಂತೆ ಕೇಳಿಸುತ್ತದೆ; ಮುಗ್ಧತೆಯನ್ನು ಸೂಚಿಸುವ ಪದದಂತೆ ಕೇಳಿಸುತ್ತದೆ; ನಾಗರಿಕತೆ ಎಂದರೆ ನಿಸರ್ಗ ನಮಗಾಗಿ ಇದೆ ಎಂಬ ಕಾಣ್ಕೆ. ನಿಸರ್ಗ ಕೇಂದ್ರಿತ ಮನುಜನಲ್ಲ; ಮನುಜಕೇಂದ್ರಿತ ನಿಸರ್ಗ ಎನ್ನುವ ಕಾಣ್ಕೆ. ನಾಗರಿಕತೆ ಎಂದರೆ ಮನುಷ್ಯ ಸುಖಾಪೇಕ್ಷೆಯ ಬೆನ್ನು ಹತ್ತಿ ಎಲ್ಲೆಲ್ಲಿಗೋ ಧಾವಿಸಿದ ಇತಿಹಾಸ ಎಂದು ಬಗೆದೆವಾದರೆ ನಾಗರಿಕತೆ ಎಂದರೆ ಅದು ಮುಗ್ಧತೆಯ ಕೇಡು ಎನ್ನಬಹುದು. ತನ್ನ ಸುಖ ತನ್ನಲ್ಲಿದೆ ಎನ್ನುವ ಅನುಭವವೇ ಮುಗ್ಧತೆ! ಈ ಅನುಭವದಿಂದಾಗಿಯೇ ತನ್ನ ಪಾಡಿಗೆ ತಾನಿರುವುದು ಸಾಧ್ಯವಾಗುವುದು. ನಿಸರ್ಗದೊಡನೆ ನೇರವಾಗಿ ಸಂಬಂಧಿಸಿಯೇ ಅತ್ಯಂತ ವಿಕೇಂದ್ರಿತವೂ ಆದ ಸ್ಥಿತಿ ಇದು ತನ್ನಲ್ಲಿ ತಾನಿರುವುದು. ನಿಸರ್ಗವೂ ತನ್ನಲ್ಲಿ ತಾನಿದೆ. ಕುರಿಮರಿಯೂ ತನ್ನಲ್ಲಿ ತಾನಿದೆ. ಈ ಸ್ಥಿತಿಗೆ ಎಂದೂ ಕೇಡಿಲ್ಲ; ತಮ್ಮ ಪಾಡಿಗೆ ತಾವಿರಲಾರದವರು ಎಂದರೆ ತಮ್ಮ ಬದುಕೇ ತಮಗೆ ವಿರೋಧವಾದವರು ತಮಗೆ ತಾವೇ ಹಿಂಸಕರಾಗುವರು.

ನಿಜಕ್ಕಾದರೆ ಮುಗ್ಧತೆಗೆ ತಾನು ಮುಗ್ಧ ಎಂದೇ ಗೊತ್ತಿಲ್ಲ. ಆ ಹೆಸರೇ ಗೊತ್ತಿಲ್ಲ. ಹೆಸರು ಗೊತ್ತಿದ್ದರೆ ನಾವು ಪ್ರೀತಿಸುವುದು ಆ ಹೆಸರನ್ನು ಮಾತ್ರ! ನಮಗೆ ಗೊತ್ತಿರುವುದನ್ನು ಮಾತ್ರ ನಾವು ಪ್ರೀತಿಸಬಲ್ಲೆವು ಅಥವಾ ದ್ವೇಷಿಸಬಲ್ಲೆವು. ಅಂದರೆ ನಮಗೆ ಗೊತ್ತಿದೆ ಎಂಬ ಭಾವನೆಯಿಂದ ಹುಟ್ಟಿಕೊಂಡ ರಾಗ–ದ್ವೇಷಗಳಿವು. ಇದರರ್ಥವೇನೆಂದರೆ ಪರ್ಯಾಯವಾಗಿ ನಾವು ನಮ್ಮನ್ನೇ ಪ್ರೀತಿಸುವುದು/ ದ್ವೇಷಿಸುವುದು. ಇದು ಮುಗ್ಧತೆಯ ಕೇಡು!

ಕುರಿಮರಿಗೆ ತಾನು ಕುರಿಮರಿ ಎಂದೂ ಗೊತ್ತಿಲ್ಲ. ಅದು ನಾವಿಟ್ಟ ಹೆಸರು. ಯಾವ ಹೆಸರಿಟ್ಟರೂ ಅಥವಾ ಇಡದಿದ್ದರೂ ಅದಕ್ಕೆ ಒಪ್ಪಿಗೆಯೇ. ಅದು ತಕರಾರು ಎತ್ತದು. ಸಾಕ್ಷಾತು ದೇವರ ಹಾಗೆ ಈ ಕುರಿಮರಿ!

ಶಬ್ದದೊಳಗಿನ ನಿಶಬ್ದ ಎನ್ನುತ್ತಾನೆ ಅಲ್ಲಮ. ಶಬ್ದಕ್ಕೆ ಕೇಡಿರಬಹುದು. ಇದೆ. ನಿಶಬ್ದಕ್ಕೆ ಕೇಡುಂಟೆ! ನಿಶಬ್ದವು ಮುಗ್ಧವಲ್ಲವೆ? ಅಲ್ಲಮನ ಈ ಮಾತು ನೆನೆದರೆ ಮಾತು ಮೂಕವಾಗುತ್ತದೆ. ಕುರಿಮರಿ, ಮೂಕಪ್ರಾಣಿಯಲ್ಲವೆ? ನಿಶಬ್ದ ಎನ್ನುವ ಹಿನ್ನೆಲೆಯಲ್ಲಿ ಮೂಕಪ್ರಾಣಿ ಎನ್ನುವ ಪದಕ್ಕೆ ಹೊಸ ಹೊಳಪು ಉಂಟಾಗುತ್ತದೆಯಲ್ಲವೆ! ಪುಣ್ಯಕೋಟಿ ಎಂಬ ಹಸು, ಸಿದ್ಧರಾಮನ ಈ ಕುರಿಮರಿ ಕನ್ನಡದ ಭಾಗ್ಯಗಳೆನ್ನಬೇಕು.

■ ತೋಷ

## ಮಾತೇ ಮುತ್ತು

★ ನಾಲಗೆ ಆತ್ಮದ ವೈರಿ. ತುಟಿಗಳು ಸುಮ್ಮನಿದ್ದಾಗ ಹೃದಯಕ್ಕೆ ನೂರಾರು ನಾಲಗೆಗಳಿರುತ್ತವೆ.

–ರೂಮಿ

★ ಸ್ಥಿರ ಚಿತ್ತವೇಕಿನ್ನು ಬರಲಿಲ್ಲ, ತಾಯೆ?
ಚಿತ್ತವನು ಮುತ್ತಿರುವುದೇಕಿನ್ನು ಮಾಯೆ?

–ಕುವೆಂಪು

★ ಹೊಟ್ಟೆಯ ಹಸಿವನ್ನು ಹೇಗಾದರೂ ನೀಗಿಸಬಹುದು. ಆದರೆ ಪ್ರೀತಿಯ ಹಸಿವನ್ನು ನೀಗಿಸುವುದು ಕಷ್ಟ.

–ಮದರ್ ತೆರೇಸಾ

★ ಅತ್ಯುತ್ತಮ ಗೆಳೆಯ ಮತ್ತು ಅತ್ಯಂತ ಕೆಟ್ಟ ವೈರಿ ಇಬ್ಬರೂ ನಿಮ್ಮೊಳಗೇ ಇದ್ದಾನೆ.

–ಇಂಗ್ಲಿಷ್ ಗಾದೆ

★ ಚಿತ್ರವೆಂದರೆ ಮೌನವಾಗಿರುವ ಕಾವ್ಯ. ಕಾವ್ಯವೆಂದರೆ ಮಾತನಾಡುವ ಚಿತ್ರ.

–ಪ್ಲುಟಾರ್ಕ್

★ ಒಂದೋ ಓದಲು ಅರ್ಹವಾದದ್ದನ್ನು ಬರೆಯಿರಿ. ಇಲ್ಲವೇ ಬರೆಯುವುದಕ್ಕೆ ಅರ್ಹವಾದದ್ದನ್ನು ಮಾಡಿರಿ.

–ಬೆಂಜಮಿನ್ ಫ್ರಾಂಕ್ಲಿನ್

★ ಅತ್ಯುತ್ತಮ ಆಡಳಿತ ಇರುವ ದೇಶದಲ್ಲಿ ಬಡತನ ಎನ್ನುವುದು ನಾಚಿಕೆಯ ಸಂಗತಿ. ಕೆಟ್ಟ ಆಡಳಿತ ಇರುವ ದೇಶದಲ್ಲಿ ಶ್ರೀಮಂತಿಕೆ ಎನ್ನುವುದು ನಾಚಿಕೆಯ ಸಂಗತಿ.

–ಕನ್‌ಫ್ಯೂಶಿಯಸ್

★ ಇವನಾರವ ಇವನಾರವ ಇವನಾರವ
ನೆಂದಿನಸದಿರಯ್ಯಾ
ಇವನಮ್ಮವ ಇವನಮ್ಮವ ಇವನಮ್ಮವ
ನೆಂದಿನಸಯ್ಯಾ
ಕೂಡಲಸಂಗಮದೇವಾ ನಿಮ್ಮ ಮಹಾಮನೆಯ
ಮಗನೆಂದನಿಸಯ್ಯ.

–ವಿಶ್ವಗುರು ಬಸವಣ್ಣ